8235-00-111-0-02 "Public Contributions to Calamity Relief" ಅಡಿಯಲ್ಲಿ ಬಿಡುಗಡೆ ಮಾಡಲಾಗಿದೆ.

ಕೇಂದ್ರ ಸರ್ಕಾರವು ಇಂದಿರಾ ಆವಾಸ್ ಯೋಜನೆಯಡಿ ನೀಡಿದ ಗುರಿಗೆ ಅನುಗುಣವಾಗಿ ರೂ. 297.48 ಕೋಟಿಗಳ ಅನುದಾನವನ್ನು ಮೀಸಲಿಡಲಾಗಿದೆ.

ಇ) ಆಸರೆ ಯೋಜನೆಯಡಿ ನೀಡಲಾದ 14850 ಮನೆಗಳ ಪೈಕಿ 13057 ಮನೆಗಳು ಪ್ರಾರಂಭಗೊಂಡು, ಈವರೆಗೆ 3029 ಮನೆಗಳ ಕಾಮಗಾರಿಗಳನ್ನು ಪೂರ್ತಿಗೊಳಿಸಿದೆ. ಇನ್ನುಳಿದಂತೆ 11821 ಮನೆಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತದೆ.

ಕೇಂದ್ರ ಸರ್ಕಾರವು ಇಂದಿರಾ ಆವಾಸ್ ಯೋಜನೆಯಡಿ ನೆರೆ ಹಾವಳಿ ಸಂತ್ರಸ್ಥರಿಗಾಗಿ ನೀಡಲಾದ 7437 ಗುರಿಗೆ ಎದುರಾಗಿ 1478 ಫಲಾನುಭವಿಗಳು ಈಗಾಲೇ ಆಯ್ಕೆಯಾಗಿದ್ದು, ಉಳಿದ ಫಲಾನುಭವಿಗಳ ಆಯ್ಕೆಯು ಪ್ರಗತಿಯಲ್ಲಿರುತ್ತದೆ. ಹಾಗೂ 14 ಮನೆಗಳು ಪೂರ್ಣಗೊಂಡಿದ್ದು, 335 ಮನೆಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ.

ಈ) ಪ್ರಾರಂಭಗೊಂಡಿರುವ 13057 ಮನೆಗಳ ಪೈಕಿ 3029 ಮನೆಗಳ ಕಾಮಗಾರಿಯು ಪೂರ್ತಿಗೊಳಿಸಲಾಗಿದೆ. 498 ಮನೆಗಳು ಸಂಬಂಧಪಟ್ಟ ಜಿಲ್ಲಾಡಳಿತಕ್ಕೆ ಹಸ್ತಾಂತರಿಸಲಾಗಿರುತ್ತದೆ.

**ಆಸರೆ ಯೋಜನೆ ಮನೆಗಳ ವಿವರ**

153 (192) ಶ್ರೀ ವಸಂತಬಂಗೇರ .ಕೆ (ಬೆಳ್ತಂಗಡಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಸರೆ ಯೋಜನೆಯಲ್ಲಿ ರಾಜ್ಯದಲ್ಲಿ ಎಷ್ಟು ಮನೆಗಳನ್ನು ರಚಿಸಲು ಗುರಿ ನಿಗದಿಪಡಿಸಲಾಗಿದೆ;

ಆ) ಈವರೆಗೆ ಎಷ್ಟು ಮನೆಗಳನ್ನು ಪೂರ್ತಿಗೊಳಿಸಲಾಗಿದೆ;

ಇ) ಎಷ್ಟು ಮನೆಗಳನ್ನು ಈವರೆಗೆ ಫಲಾನುಭವಿಗಳಿಗೆ ಹಸ್ತಾಂತರಿಸಲಾಗಿದೆ;

ಈ) ಈವರೆಗೆ ಈ ಯೋಜನೆಗಾಗಿ ಸರ್ಕಾರದಿಂದ ಎಷ್ಟು ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ; (ಜಿಲ್ಲಾವಾರು ವಿವರಗಳನ್ನು ನೀಡುವುದು)?

ಶ್ರೀ ಕರುಣಾಕರ ರೆಡ್ಡಿ (ಕಂದಾಯ ಸಚಿವರು):

ಅ) 59,212 ಮನೆಗಳು

ಆ) 17,194 ಮನೆಗಳು

ಇ) 3723 ಮನೆಗಳು

ಈ) ಕೆಳಕಂಡಂತೆ ಜಿಲ್ಲಾಧಿಕಾರಿ / ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಜಿ.ಪಂ.)/ಸಂಸ್ಥೆಗಳಿಗೆ ಹಣ ಬಿಡುಗಡೆ ಮಾಡಲಾಗಿದೆ.

| ಕ್ರ.ಸಂ. | ಜಿಲ್ಲಾಧಿಕಾರಿ /ಸಿ.ಇ.ಓ. ಜಿ.ಪಂ. / ಸಂಸ್ಥೆಗಳು | ಬಿಡುಗಡೆ ಮಾಡಿದ ಹಣ (ರೂ. ಲಕ್ಷಗಳಲ್ಲಿ) |
|---|---|---|
| 1 | ಜಿಲ್ಲಾಧಿಕಾರಿ, ಬೆಳಗಾಂ | 500.00 |
| 2 | ಜಿಲ್ಲಾಧಿಕಾರಿ, ಬಾಗಲಕೋಟೆ | 434.20 |
| 3 | ಜಿಲ್ಲಾಧಿಕಾರಿ, ದಾವಣಗೆರೆ | 488.80 |
| 4 | ಜಿಲ್ಲಾಧಿಕಾರಿ, ಬೀದರ್ | 100.00 |
| 5 | ಜಿಲ್ಲಾಧಿಕಾರಿ, ರಾಯಚೂರು | 1170.00 |
| 6 | ಜಿಲ್ಲಾಧಿಕಾರಿ, ಬಿಜಾಪುರ | 1529.05 |
| 7 | ಸಿ.ಇ.ಒ., ಜಿ.ಪಂ., ಬಾಗಲಕೋಟೆ | 500.00 |
| 8 | ಸಿ.ಇ.ಒ., ಜಿ.ಪಂ., ಬಿಜಾಪುರ | 600.00 |
| 9 | ಕರ್ನಾಟಕ ಗೃಹ ಮಂಡಳಿ | 5000.00 |
| 10 | ಕೆ.ಆರ್.ಐ.ಡಿ.ಎಲ್–ಬೆಂಗಳೂರು | 10000.00 |
| 11 | ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ | 14579.00 |
| | ಒಟ್ಟು | **34901.05** |

**ಅನುಬಂಧ–II**

**ಕರ್ನಾಟಕ ವಿಧಾನ ಸಭೆ**

**ಹದಿಮೂರನೇ ವಿಧಾನಸಭೆ**

**ಒಂಭತ್ತನೇ ಅಧಿವೇಶನ**

**ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 2011**

**(2011ರ ವಿಧಾನಸಭೆಯ ವಿಧೇಯಕ ಸಂಖ್ಯೆ 9)**

ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ ಅಧಿನಿಯಮ, 1986 ಅನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ ಅಧಿನಿಯಮ, 1986ನ್ನು (1986ರ